





**ಪುಟ್ನಂಜ:** ನಿನ್ ಮಗ ಏನ್ಮಾಡ್ಕಂಡವ್ನೆ?
**ನಂಜ:** ಬಿಎ ಮಾಡ್ಕಂಡವ್ನೆ?
**ಪುಟ್ನಂಜ:** ಜೀವನಕ್ಕೆ ಏನ್ಮಾಡ್ಕಂಡವ್ನೆ?
**ನಂಜ:** ಬಿಎ ಮಾಡ್ಕಂಡವ್ನೆ.
**ಪುಟ್ನಂಜ:** ಅಂದ್ರೆ.
**ನಂಜ:** ಬೋಂಡದ ಅಂಗಡಿ.

**ಪುಟ್ನಂಜ:** ಲೋ ನಂಜ ಯಾಕೋ ಯಾವಾಗ್ಲೂ ವಟವಟ ಅಂತ ಮಾತಾಡ್ತಾ ಇರ್ತೀಯಾ?
**ನಂಜ:** ನಮ್ ಕನ್ನಡ ಭಾಷೇನಾ ನಾವೇ ಮಾತಾಡಿ ಬೆಳೆಸಬೇಕಲ್ಲ, ಅದಕ್ಕೆ.




**ಪತ್ರಕರ್ತ:** ನಿಮ್ಮ ಧಾರಾವಾಹಿಯೆ ಟಾಪ್ ಅಂತ ಯಾವ ಆಧಾರದ ಮೇಲೆ ಹೇಳ್ತೀರಾ?
**ನಿರ್ದೇಶಕ:** ನಮ್ಮ ಧಾರಾವಾಹಿಯ ನಾಯಕಿಗೆ ಅಂತಹ ಪಾರದರ್ಶಕ ಟಾಪ್ ಹಾಕ್ಸಿದ್ದೀವಿ, ಅದ್ಕೆ.

**ಪುಟ್ನಂಜ:** ಸ್ವಾಮಿಗಳೆ ಮನೇಲಿ ಶಾಂತಿ ಇರಬೇಕು ಅಂದ್ರೆ ಏನ್ಮಾಡಬೇಕು?
**ಪುರೋಹಿತರು:** ಹುಟ್ಟೋ ಮಗಳಿಗೆ ಶಾಂತಿ ಅಂತ ಹೆಸರು ಇಟ್ಟಿಡಿ ಅಷ್ಟೇ.

**ಪುಟ್ನಂಜ:** ಇರೋ ಒಬ್ನೇ ಒಬ್ಬ ಮಗನನ್ನ ಯಾಕೋ ಬ್ಯಾರೆ ಹಾಕಿದ್ದೀಯಾ?
**ನಂಜ:** ನಾನು ಬದುಕಿರುವಾಗಲೆ ತನ್ನನ್ನ ತಾನು, 'ನಾನು ಮಣ್ಣಿನ ಮಗ, ಮಣ್ಣಿನ ಮಗ' ಅಂತ ಹೇಳ್ಕೊಂಡು ಓಡಾಡ್ತಾ ಇದ್ದ. ಅದ್ಕೇ ಬ್ಯಾರೆ ಹಾಕಿದ್ದೀನಿ.

**ಪುಟ್ನಂಜ:** ನಂಜ ಈ ರಾಜಕಾರಣಿಗಳಿಗೆ ಜಾಮೀನು ಬೇಗ ಸಿಗುತ್ತೆ, ಅಷ್ಟೇ ಬೇಗ ಜಾಮೀನು ವಿಸ್ತರಣೆ ಆಗುತ್ತೆ, ಏನವರ ಕರಾಮತ್ತು?
**ನಂಜ:** ಅವರ ಜಮೀನೆ ದಿನೇ ದಿನೇ ವಿಸ್ತರಣೆ ಆಗ್ತಾ ಇರುತ್ತೆ, ಇನ್ನು ಜಾಮೀನು ಯಾವ ಲೆಕ್ಕ.

**ಹೆಂಡತಿ:** ಅಷ್ಟೊತ್ತಿನಿಂದ ಏನು ಹುಡುಕುತ್ತಿದ್ರಿ?
**ಗಂಡ:** ಪಿ.ಎಚ್‌ಡಿ ಕಣೇ. ಎಷ್ಟು ಹುಡುಕಿದ್ರೂ ಸಿಗ್ತಾನೇ ಇಲ್ಲ.
**ಹೆಂಡತಿ:** ಪಿ.ಎಚ್‌ಡಿ. ಎಂದರೇನು?
**ಗಂಡ:** ಅದೆ ಕಣೇ ಪೈಜಾಮಾ ಹೋಲ್ಡಿಂಗ್ ಡಿವೈಸ್ ಮೀನ್ಸ್ ಪೈಜಾಮಾ ಲಾಡಿ.

**ಪುಟ್ನಂಜ:** ನಂಜ ಮದುವೆ ಆದ್ಮೇಲೆ ಜೀವನ ಹ್ಯಾಗೆ ನಡೀತಿದೆ?
**ನಂಜ:** ಜೀವನ ಹ್ಯಾಗೊ ನಡೀತಾ ಇದೆ. ಏನ್ ನಡೀತಿಲ್ಲ ಅಂತ ಕೇಳು?
**ಪುಟ್ನಂಜ:** ಏನ್ ನಡೀತಿಲ್ಲ.
**ನಂಜ:** ನನ್ ಮಾತು.

ರಸಪ್ರಶ್ನೆ ಕಾರ್ಯಕ್ರಮದಲ್ಲಿ ಕ್ವಿಜ್ ಮಾಸ್ಟರ್ ಒಬ್ಬರು ಪುಟ್ನಂಜನಿಗೆ ಹೀಗೆ ಕೇಳಿದರು...
**ಕ್ವಿಜ್ ಮಾಸ್ಟರ್:** 'ಕಮಲದ ಕಣ್ಣೋಳೆ, ಕಮಲದ ಮೊಗದೋಳೆ ಕಮಲವ ಕೈಯಲ್ಲಿ ಹಿಡಿದೋಳೆ' ಈ ಹಾಡನ್ನು ಬರೆದವರು ಯಾರು?
**ಪುಟ್ನಂಜ:** ಈ ಹಾಡನ್ನು ಬರೆದವರು ಕಮಲ ಚಿಹ್ನೆಯ ಬಿಜೆಪಿಯವರೇ ಆಗಿರಬೇಕು ಸರ್!

**ಪುಟ್ನಂಜ:** ನಂಜ ನಿಮ್ಮಮ್ಮ ಏನ್ಮಾಡ್ಕಂಡವ್ರೆ?
**ನಂಜ:** ಸೊಸೆ ಜೊತೆ ಜಗಳ ಮಾಡ್ಕಂಡವ್ರೆ.

ಸಂಗ್ರಹ: ಮಲ್ಲಿಕಾರ್ಜುನ ಸುರಧೇನುಪುರ